**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ**

**ಸ್ಪೆಷಲ್ ಕೇಸ್: 54/2019**

ಫ್ರಾಸಾ- 12
ಚಾಸಾ- 17

| | | |
|---|---|---|
| ಸಾಕ್ಷಿದಾರರ ಹೆಸರು | : | ಗಣಪತಿ |
| ತಂದೆಯ ಹೆಸರು | : | ಮುದ್ದೆಗೌಡ |
| ವಯಸ್ಸು | : | 33 ವರ್ಷ |
| ವೃತ್ತಿ | : | ಫೈನಾನ್ಸ |
| ವಾಸ | : | ಗುಮ್ಮನಕೊಲ್ಲಿ ಗ್ರಾಮ. |

ಸಾಕ್ಷಿಯನ್ನು ದಿನಾಂಕ **12-07-2024** ರಂದು ಕರೆಯಿಸಿ ಪ್ರಮಾಣ ವಚನ **ಭೋಧಿಸಲಾಯಿತು.**

<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ</u>:

ಚಾಸಾ-16 ನನ್ನ ಸ್ನೇಹಿತ. ಈಗ ನಾನು ನೋಡುತ್ತಿರುವ ಮಹಜರ್ ನಲ್ಲಿ ನನ್ನ ಸಹಿ ಇದೆ. 3-4 ವರ್ಷಗಳ ಮೊದಲು ನನ್ನನ್ನು ಹಾಗೂ ಚಾಸಾ-16 ರವರನ್ನು ಕುಶಾಲನಗರ ಪೊಲೀಸರು ಡಿವೈಎಸ್ ಪಿ ರವರ ಕಛೇರಿಗೆ ಬರಲು ಹೇಳಿದ್ದರು ಅದರಂತೆ ನಾವು ಠಾಣೆಗೆ ಹೋದಾಗ ಮೈಸೂರಿನ ಆಸ್ಪತ್ರೆಯಿಂದ ಗುಂಡುಗಳುಳ್ಳ ಒಂದು ಡಬ್ಬವನ್ನು ಪೊಲೀಸರು ಡಿವೈಎಸ್ ಪಿ ರವರ ಎದುರು ಹಾಜರುಪಡಿಸಿದ ಮೇರೆಗೆ ಸದರಿ ಸ್ವತ್ತುಗಳನ್ನು ನಮ್ಮ ಸಮಕ್ಷಮ ಮಹಜರ್ ಮುಖಾಂತರ ಅಮಾನತ್ತುಪಡಿಸಿಕೊಂಡಿದ್ದರು. ಗುಂಡು ಹೊಡೆದ ಪ್ರಕರಣದಲ್ಲಿ ಸದರಿ ಸ್ವತ್ತುಗಳನ್ನು ಅಮಾನತ್ತುಪಡಿಸಿಕೊಳ್ಳಲಾಯಿತ್ತು. ಈಗ ನಾನು ನೋಡುತ್ತಿರುವ ಮಹಜರ್ ಆ ಸಂದರ್ಭದಲ್ಲಿ ತಯಾರಿಸಿದ ಮಹಜರ್ ಆಗಿದ್ದು, ಅದನ್ನು ನಿಪಿ-16 ಎಂದು , ಸಾಕ್ಷಿ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು.

ನನ್ನ ಸಮಕ್ಷಮದಲ್ಲಿ ಅಮಾನತ್ತುಪಡಿಸಿಕೊಂಡ ಗುಂಡು ಹಾಗೂ pellets ಗಳುಳ್ಳ ಪ್ಲಾಸ್ಟಿಕ್ ಬಾಕ್ಸನ್ನು ನೋಡಿದರೆ ಗುರುತಿಸುತ್ತೇನೆ.

ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸೀಲಾದ ಸ್ವತ್ತುಗಳನ್ನು ತೆರೆಯಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.

ಈಗ ನಾನು ನೋಡುತ್ತಿರುವ ಪ್ಲಾಸ್ಟಿಕ್ ಬಾಕ್ಸ ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡ ಗುಂಡು ಹಾಗೂ pellets ಗಳುಳ್ಳ ಪ್ಲಾಸ್ಟಿಕ್ ಬಾಕ್ಸನ್ನು ಅದನ್ನು ಮು.ಮಾ-7 ಎಂದು ಗುರುತಿಸಲಾಯಿತು. ಮು.ಮಾ-7 ರ ಮೇಲೆ ಇರುವ ಬಟ್ಟೆಯ ಚೀಲದ ಮೇಲೆ ಅಂಟಿಸಿದ ಚೀಟಿಯ ಮೇಲೆ ನನ್ನ ಸಹಿ ಇದೆ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ಪೊಲೀಸರ ಮುಂದೆ ನೀಡಿದ ಹೇಳಿಕೆ ಮತ್ತು ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಗಿದೆ).**

**<u>ಪಾಟೀಸವಾಲು- ಸರ್ಕಾರಿ ಅಭಿಯೋಜಕರಿಂದ:</u>**

ದಿನಾಂಕ 24-10-2019 ರಂದು ಪೊಲೀಸರು ನನ್ನನ್ನು ಕುಶಾಲನಗರ ಡಿವೈಎಸ್ ಪಿ ಕಛೇರಿಗೆ ಕರೆದಿದ್ದರು ಎಂದರೆ ಸರಿ. ಅಲ್ಲಿ ರಮೇಶ್ ಎಂಬ ಪೊಲೀಸರ ಮು.ಮಾ-7 ರ ಪ್ಲಾಸ್ಟಿಕ್ ಬಾಕ್ಸ ನ್ನು ಡಿವೈಎಸ್ ಪಿ ರವರ ಎದುರು ಹಾಜರುಪಡಿಸಿದ್ದರು ಎಂದರೆ ಸರಿ. ಸೋಮವಾರಪೇಟೆಯ ಸುಜೀತ್ ಎಂಬುವವರಿಗೆ ಆರೋಪಿ ಗುಂಡು ಹೊಡೆದರು ಎಂದು ಅವರ ಮೇಲೆ ಪ್ರಕರಣ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸುಜೀತ್ ರವರ ದೇಹದಲ್ಲಿ ಮು.ಮಾ-7 ರ ಗುಂಡು ಇದ್ದವು ಅವುಗಳನ್ನು ಮೈಸೂರಿನ ಆಸ್ಪತ್ರೆಯಿಂದೆ ವೈದ್ಯರು ಸಂಗ್ರಹಿಸಿ ನೀಡಿದ್ದನ್ನು ರಮೇಶ್ ಪೊಲೀಸರು ಡಿವೈಎಸ್ ಪಿ ರವರ ಎದುರು ಹಾಜರುಪಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

ನನಗೆ ಈ ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿ ಕೋರಿಕೊಂಡ ಮೇರೆಗೆ ನಾನು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು- ಆರೋಪಿತರ ಪರವಾಗಿ ಶ್ರೀ. ಎ.ಜಿ.ಜಿ ವಕೀಲರಿಂದ:</u>**

ನಾನು ಠಾಣೆಗೆ ಹೋದಾಗ pellets ಗಳು ಪೊಲೀಸರ ಕೈಯಲ್ಲಿ ಇದ್ದು ಅವು ಪೊಲೀಸರ ಕೈಗೆ ಎಲ್ಲಿಂದು ಬಂದು ಎಂದು ನನಗೆ ಗೊತ್ತಿಲ್ಲ. ಪೊಲೀಸರು ಅವುಗಳನ್ನು ಎಲ್ಲಿಂದ ತಂದರು ಎಂಬುದಾಗಿ ನನ್ನಲ್ಲಿ ಹೇಳಿಲ್ಲ. ಯಾವ ವಿಚಾರಣಕ್ಕಾಗಿ ನನ್ನಿಂದ ಮಹಜರ್ ಗೆ ಸಹಿ ತೆಗೆದುಕೊಂಡಿದ್ದರು ಎಂದು ನನಗೆ ಹೇಳಿಲ್ಲ. ನಿಪಿ-16 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಕೋರಿಕೊಂಡ ಮೇರೆಗೆ ಸದರಿ ಮಹಜರ್ ಗೆ ಸಹಿ ಹಾಕಿದ್ದೇನೆ. ಪ್ರಕರಣದ ವಿಚಾರ ನನಗೆ ಏನು ಗೊತ್ತಿಲ್ಲ.

<u>ಮರುವಿಚಾರಣೆ:</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ